KATK010039232023

<u>**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ತುಮಕೂರು**</u>

<u>**ವಿಶೇಷ ಮೊಕದ್ದಮೆ ಸಂಖ್ಯೆ.474/2023**</u>

ಪ್ರಾ.ಸಾ. ಃ **4**

ದೋ.ಸಾ. ಃ **7**

ದಿ.**13.11.2025**

ಹೆಸರು ಃ ಮಹಾಂತೇಶ್

ತಂದೆಯ ಹೆಸರು ಃ ಭೀಮಣ್ಣ

ವಯಸ್ಸು ಃ **18** ವರ್ಷ

ಉದ್ಯೋಗ ಃ ಚಾಲಕ

ವಾಸಸ್ಥಳ ಃ ಅತ್ತಿಬೆಲೆ, ಬೆಂಗಳೂರು, ಸ್ವಂತ ಊರು ಸುರಪುರ, ಯಾದಗಿರಿ ಜಿಲ್ಲೆ

ಸಾಕ್ಷಿಯನ್ನು ಕರೆಸಿ, ಪ್ರಮಾಣವಚನ ಬೋಧಿಸಲಾಯಿತು.

<u>**ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ**</u>

1. ನಾನು 9 ನೇ ತರಗತಿಯನ್ನು ಶ್ರೀ ವಿಶ್ವಭಾರತಿ ಪ್ರೌಢಶಾಲೆಯಲ್ಲಿ ಮುಗಿಸಿದ್ದೇನೆ. ಆ ಸಮಯದಲ್ಲಿ ನಾನು ಶ್ರೀ ವಿಶ್ವಭಾರತಿ ವಿದ್ಯಾರ್ಥಿ ನಿಲಯದಲ್ಲಿ ಉಳಿದುಕೊಂಡಿದ್ದೆನು. ನನಗೆ ಆ ಶಾಲೆಯ ಟೀಚರ್ ಮಲ್ಲಮ್ಮ ಗೊತ್ತಿದೆ. 2-3 ವರ್ಷಗಳ ಹಿಂದೆ ಒಂದು ದಿನ ರಾತ್ರಿ ಸದರಿ ಮಲ್ಲಮ್ಮ ನಮ್ಮ ಹಾಸ್ಟೆಲ್ ಗೆ ರಾತ್ರಿ ಪಾಳಿಯಲ್ಲಿ ಬಂದಿದ್ದರು. ಆಗ ನನಗೆ ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ಇತ್ತು. ಆರೋಪಿ ಸದರಿ ಶ್ರೀ ವಿಶ್ವಭಾರತಿ ವಿದ್ಯಾರ್ಥಿ ನಿಲಯದ ಮಾಲೀಕರು. ಭರತ್ ರವರು ಹಾಸ್ಟೆಲ್ ನ ಹುಡುಗರಿಗೆ ಹೊಡೆದರು ಎಂದು ಹಾಸ್ಟೆಲ್ ನ ಹುಡುಗರು ಹೇಳಿದರು. ನಾನು ಆ ಸಮಯದಲ್ಲಿ ರೂಮಿನಲ್ಲಿ ಮಲಗಿದ್ದೆನು. ನನಗೆ ಆರೋಪಿ ಹೊಡೆದಿಲ್ಲ. ಎಷ್ಟು ಜನಕ್ಕೆ ಹೊಡೆದಿದ್ದಾರೆಂದು ನನಗೆ ಗೊತ್ತಿಲ್ಲ. ಯಾವುದರಲ್ಲಿ ಹೊಡೆದಿದ್ದರು ಎಂದು ಗೊತ್ತಿಲ್ಲ. ನಾನು

ಪೋಲೀಸರ ಮುಂದೆ ಹೇಳಿಕೆ ಕೊಟ್ಟಿಲ್ಲ. ಸರ್ಕಾರಿ ಅಧಿಕಾರಿಗಳು ನಮ್ಮ ಹಾಸ್ಟೆಲ್ ಗೆ ಬಂದಿದ್ದರು. ನಿಶಾನೆ ಪಿ17 ಫೋಟೋದಲ್ಲಿ ನಾನು ಇದ್ದೇನೆ. ಎಷ್ಟು ಗಂಟೆಗೆ ಗಲಾಟೆಯಾಗಿದೆ ಎಂದು ನನ್ನನ್ನು ವಿಚಾರಿಸಿದರು, ನಾನು ಏನು ಹೇಳಿದ್ದೇನೆ ಎಂದು ಈಗ ನೆನಪಿಲ್ಲ.

2. ನಾನು ಆ ಸಮಯದಲ್ಲಿ ನ್ಯಾಯಾಲಯಕ್ಕೆ ಬಂದಿದ್ದೆನು. ನ್ಯಾಯಾಲಯದಲ್ಲಿ ಏನು ಹೇಳಿದ್ದೇನೆ ಎಂದು ಈಗ ನೆನಪಿಲ್ಲ. ಈಗ ನನಗೆ ತೋರಿಸಿದ ಹೇಳಿಕೆಯಲ್ಲಿ ನನ್ನ ಸಹಿ ಇದೆ. ಆ ಹೇಳಿಕೆಯನ್ನು ನಿಶಾನೆ ಪಿ30 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ30(ಎ) ಎಂದು ಗುರುತಿಸಲಾಯಿತು. ನಾನು ಪೋಲೀಸರ ಮುಂದೆಯಾಗಲೀ, ನ್ಯಾಯಾಧೀಶರ ಮುಂದೆಯಾಗಲೀ ಆರೋಪಿ ನನಗೆ ಎಡಮಟ್ಟೆ ಮತ್ತು ಬೆಲ್ಟ್ ನಿಂದ ಹೊಡೆದಿದ್ದಾರೆಂದು ಹೇಳಿಲ್ಲ.

(ಈ ಸಾಕ್ಷಿಯು ಈ ಹಿಂದೆ ತನಿಖಾಧಿಕಾರಿಯವರ ಮುಂದೆ ನೀಡಿದ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ವಿಶೇಷ ಸರಕಾರಿ ಅಭಿಯೋಜಕರು/ಸರಕಾರಿ ಅಭಿಯೋಜಕರು ಭಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡುಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗೊಂಡು ಅನುಮತಿ ನೀಡಲಾಯಿತು).

**<u>ಪಾಟೀ ಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ</u>**

3. ದಿನಾಂಕ 21.11.2022 ರಂದು ರಾತ್ರಿ 9.00 ಗಂಟೆಗೆ ನಮ್ಮ ಶಾಲೆಯ ಮಲ್ಲಮ್ಮ ಮಿಸ್ ಹಾಸ್ಟೆಲ್ ನಲ್ಲಿದ್ದ ನಮ್ಮೆಲ್ಲರಿಗೂ ಊಟ ಹಾಕಿ ಮನೆಗೆ ಹೋದರು ಎಂದರೆ ನಿಜ. ಅನಂತರ ನಾವು ರೂಮುಗಳಲ್ಲಿ ಮಲಗಿಕೊಂಡೆವು ಎಂದರೆ ನಿಜ. ರಾತ್ರಿ 10.30 ಗಂಟೆಗೆ ಆರೋಪಿ ಭರತ್ ರವರು ಮಲಗಿಕೊಂಡಿದ್ದ ನಮ್ಮ ರೂಮ್ ಗಳಿಗೆ ಬಂದು ನಮ್ಮನ್ನು ಎಬ್ಬಿಸಿ ಸಾಲಾಗಿ ನಿಲ್ಲಿಸಿದರು ಎಂದರೆ ಸರಿಯಲ್ಲ. ಯಾಕರೋ ಇಷ್ಟು ಬೇಗ ಮಲಗಿದ್ದೀರಾ, ನಾನು ಹೇಳಿದ ಮೇಲೆ ನೀವೆಲ್ಲಾ ಮಲಗಬೇಕು ಎಂದು ಹೇಳಿ ತೆಂಗಿನ ಎಡಮಟ್ಟೆಯಿಂದ ಮತ್ತು ಬೆಲ್ಟ್ ನಿಂದ ಹೊಡೆದರು

ಎಂದರೆ ಸರಿಯಲ್ಲ. **16** ಜನರಿಗೆ ಜಾಸ್ತಿ ಪೆಟ್ಟುಗಳು ಬಿದ್ದಿದ್ದವು ಎಂದರೆ ಸರಿಯಲ್ಲ. ನನ್ನ ಬಲಗಾಲಿನ ತೊಡೆಗೆ ಪೆಟ್ಟು ಬಿದ್ದಿತ್ತು ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಚಿಕಿತ್ಸೆ ತೆಗೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಪೋಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ಕೊಟ್ಟಿದ್ದೇನೆಂದು ಹೇಳುವ ಹೇಳಿಕೆಯನ್ನು ನಿಶಾನೆ ಪಿ**31** ಎಂದು ಗುರುತಿಸಲಾಯಿತು.

**4.** ನಂತರ ತುಮಕೂರಿನ **3** ನೇ ಅಧಿಕ ಸಿವಿಲ್ ನ್ಯಾಯಾಲಯದಲ್ಲಿ ಈ ಘಟನೆಯ ಬಗ್ಗೆ ಹೇಳಿಕೆ ನೀಡಿ, ಅದನ್ನು ಓದಿ ನಾನು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ನನಗೆ ನ್ಯಾಯಾಧೀಶರು ಏನಾದರೂ ಒತ್ತಡ ಇದೆಯೇ ಎಂದು ಕೇಳಿದರು ಎಂದರೆ ನನಗೆ ನೆನಪಿಲ್ಲ. ನನಗೆ ಯಾವುದೇ ಒತ್ತಡ ಇಲ್ಲವೆಂದು ನ್ಯಾಯಾಧೀಶರ ಮುಂದೆ ಹೇಳಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಊರಿನ ಹುಡುಗರು ಯಾರೂ ಶ್ರೀ ವಿಶ್ವಭಾರತಿ ಶಾಲೆಯಲ್ಲಿ ಓದುತ್ತಿಲ್ಲ. ನಾನು ಆ ಶಾಲೆಯಲ್ಲಿ ಓದಿದ್ದರಿಂದ ಅವರನ್ನು ಈ ಕೇಸಿನಿಂದ ಬಚಾವು ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಶ್ರೀ.ಎಂ.ಸಿ.ಚಂದ್ರಯ್ಯ, ವಕೀಲರಿಂದ ಆರೋಪಿತರ ಪರವಾಗಿ :**

**5.** ಆರೋಪಿ ಹೊಡೆದರು ಎಂದು ಹುಡುಗರು ನನಗೆ ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ

**(**ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು**).**

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು